ಫ್ಯಾಕ್ಸ್ / Fax : 080-25586321
ಈಮೇಲ್ / E-mail : ho@kspcb.gov.in
ವೆಬ್‌ಸೈಟ್ / Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರಭವನ", 1 ರಿಂದ 5ನೇ ಮಹಡಿಗಳು, ನಂ.49, ಚರ್ಚ್‌ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ:ಮಾನಿಮಂ/06/ದೂ.ಕೋ./2015-16/ 5150 ದಿನಾಂಕ: 15 DEC 2015

## ಸುತ್ತೋಲೆ

**ವಿಷಯ:** ಸಾರ್ವಜನಿಕರ ದೂರಿನ ಅನ್ವಯ ಕ್ರಮತೆಗೆದುಕೊಳ್ಳುವ ಬಗ್ಗೆ.

**********

ಸಾರ್ವಜನಿಕರು ಮಾಲಿನ್ಯಕ್ಕೆ ಸಂಬಂಧಿಸಿದ ದೂರುಗಳನ್ನು ಮಂಡಳಿಯ ಕೇಂದ್ರ ಕಛೇರಿ, ಪ್ರಾದೇಶಿಕ ಕಛೇರಿ, ಸರ್ಕಾರದ ಮಟ್ಟದಲ್ಲಿ ಸಲ್ಲಿಸುತ್ತಿರುವುದು ಸರಿಯಷ್ಟೆ. ಈ ದೂರುಗಳಲ್ಲಿ ಕೆಲವು ವಿಷಯಗಳು ಮಂಡಳಿಗೆ ಸಂಬಂಧಪಟ್ಟಿದಾಗಿದ್ದು ಇನ್ನು ಕೆಲವು ವಿಷಯಗಳು ಮಂಡಳಿಯ ವ್ಯಾಪ್ತಿಗೊಳಪಡದೆ ಬಿ.ಬಿ.ಎಂ.ಪಿ/ಸ್ಥಳೀಯ ಸಂಸ್ಥೆಗಳು, ಪೋಲೀಸ್ ಮತ್ತು ಸಾರಿಗೆ ಇಲಾಖೆಗಳಿಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಈ ಕುರಿತು ಮಂಡಳಿಯು ಈಗಾಗಲೇ ಹೊರಡಿಸಿರುವ ತನ್ನ ನಾಗರಿಕ ಸನ್ನದ್ದಿ(Citizen Charter)ನಂತೆ ದೂರುಗಳ ಕುರಿತು ಕ್ರಮಕೈಗೊಳ್ಳಬೇಕಾಗಿರುತ್ತದೆ. ಸದ್ಯಕ್ಕೆ ಮಂಡಳಿಗೆ ಸಂಬಂಧಪಡುವ ವಿಷಯಗಳ ಕುರಿತು ದೂರುಗಳು ಸ್ವೀಕೃತವಾದಲ್ಲಿ ಅವುಗಳನ್ನು ಪ್ರಾದೇಶಿಕ ಅಧಿಕಾರಿಗಳಿಂದ ಸೂಕ್ತ ಪರಿವೀಕ್ಷಣೆಗಳನ್ನು ನಡೆಸಿ ಇತ್ಯರ್ಥಗೊಳಿಸಲಾಗುತ್ತದೆ. ಈ ರೀತಿ ಇತ್ಯರ್ಥಗೊಳಿಸಿದ ದೂರಿನ ಸ್ಥಿತಿಗತಿಗಳನ್ನು ಪ್ರಾದೇಶಿಕ ಕಛೇರಿಯಿಂದ ಕೇಂದ್ರ ಕಛೇರಿಗೆ ಪ್ರತಿ ತಿಂಗಳು ಕಳುಹಿಸುವ ವ್ಯವಸ್ಥೆ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಪ್ರಾದೇಶಿಕ ಅಧಿಕಾರಿಗಳು ಮಂಡಳಿಯ ಕಾರ್ಯವ್ಯಾಪ್ತಿಗೆ ಒಳಪಡದ ವಿಷಯಗಳಿಗೆ ಸಂಬಂಧಿಸಿದ ದೂರುಗಳನ್ನು Citizen Charter)ನಂತೆ ಆಯಾ ಇಲಾಖೆಗಳಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸದೆ ವಿನಃ ಕಾರಣ ಮಂಡಳಿಯ ಕೇಂದ್ರ ಕಛೇರಿಗೆ ಮುಂದಿನ ಕ್ರಮಕ್ಕೆಂದು ರವಾನಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ.

ಈ ದಿಸೆಯಲ್ಲಿ ಇನ್ನು ಮುಂದೆ ಸಾರ್ವಜನಿಕರ ದೂರುಗಳನ್ನು ಸ್ವೀಕೃತವಾದ ಪ್ರಾದೇಶಿಕ ಕಛೇರಿಗಳಿಂದ ಸೂಕ್ತ ಪರಿವೀಕ್ಷಣೆ ನಡೆಸಿ ವರದಿಯನ್ನು ವಿಭಾಗೀಯ ಹಿರಿಯ ಪರಿಸರ ಅಧಿಕಾರಿಗಳು/ಪ್ರಾದೇಶಿಕ ಪರಿಸರ ಅಧಿಕಾರಿಗಳಿಗೆ ಕಳುಹಿಸಿ ಕೊಡುವುದು. ಈ ವರದಿಯ ಆಧಾರದ ಮೇಲೆ ವಿಭಾಗೀಯ ಹಿರಿಯ ಪರಿಸರ ಅಧಿಕಾರಿಗಳು ದೂರಿನ ಮೇಲೆ ಕ್ರಮವಹಿಸುವುದು. ವಿಷಯವು ಸ್ಥಳೀಯ ಸಂಸ್ಥೆಗೆ ಅಥವ ಇನ್ನಿತರ ಇಲಾಖೆಗಳಿಗೆ ಸಂಬಂಧಿಸಿದ್ದಾಗಿದ್ದಲ್ಲಿ ವಿಭಾಗೀಯ ಹಿರಿಯ ಪರಿಸರ ಅಧಿಕಾರಿಗಳು ಸಂಬಂಧಿಸಿದ ಕಛೇರಿಗಳಿಗೆ ಬರೆದು ಸೂಕ್ತ ನಿಯಮಾವಳಿ ಅಡಿಯಲ್ಲಿ ಕ್ರಮತೆಗೆದುಕೊಳ್ಳಲು ತಿಳಿಸುವುದು ಮತ್ತು ಈ ಬಗ್ಗೆ ದೂರುದಾರರಿಗೆ ಪ್ರಾದೇಶಿಕ ಕಛೇರಿಯಿಂದ ಹಿಂಬರಹ ನೀಡುವುದು. ಕೈಗಾರಿಕೆಗಳಿಂದ ಮಾಲಿನ್ಯವಾಗುತ್ತಿರುವ ವಿಷಯಗಳಿಗೆ ಕೂಲಂಕುಶವಾಗಿ ಪರಿಶೀಲಿಸಿ ಸೂಕ್ತ ಕ್ರಮವನ್ನು ಪ್ರಾದೇಶಿಕ ಅಧಿಕಾರಿಗಳು/ವಿಭಾಗೀಯ ಹಿರಿಯ ಪರಿಸರ ಅಧಿಕಾರಿಗಳಿಗೆ ಈಗಾಗಲೇ ನೀಡಿರುವ, ಜವಾಬ್ದಾರಿಯಂತೆ ಪಾಲಿಸುವುದು.

ಒಂದುವೇಳೆ ತಮಗೆ ಪ್ರದತ್ತವಾದ ಅಧಿಕಾರಗಳ ಅಡಿಯಲ್ಲಿ ದೂರುಗಳನ್ನು ಬಗೆಹರಿಸುವುದು ಸಾಧ್ಯವಾಗದಿದ್ದಲ್ಲಿ ಅಂತಹ ದೂರುಗಳನ್ನು ಮಾತ್ರ ವಿಭಾಗೀಯ ಹಿರಿಯ ಪರಿಸರ ಅಧಿಕಾರಿಗಳು/ಪ್ರಾದೇಶಿಕ ಅಧಿಕಾರಿಗಳು, ಕೇಂದ್ರ ಕಛೇರಿಗೆ ಮುಂದಿನ ಸೂಕ್ತ ನಿರ್ದೇಶನಕ್ಕೆ ಸಲ್ಲಿಸುವುದು. ಈ ವರದಿಯಲ್ಲಿ ಸಂಬಂಧಿಸಿದ ಅಧಿಕಾರಿಗಳು ಸೂಕ್ತ ನಿಯಮವನ್ನು ಉಲ್ಲೇಖಿಸಿ ಶಿಫಾರಸ್ಸನ್ನು ಮಾಡತಕ್ಕದು.

ಮಂಡಳಿಯು ಈ ದಿಸೆಯಲ್ಲಿ ಈಗಾಗಲೇ ಹೊರಡಿಸಿರುವ (Citizen Charter) ಪ್ರತಿಯನ್ನು ಇನ್ನೊಮ್ಮೆ ಲಗತ್ತಿಸಲಾಗಿದೆ ಹಾಗೂ ಈ ವಿಷಯವನ್ನು ಎಲ್ಲಾ ಕಛೇರಿಗಳಿಗೆ ಇಮೇಲ್ ಮೂಲಕ ಸೂಕ್ತ ಕ್ರಮಕ್ಕಾಗಿ ಕಳುಹಿಸಕೊಡಲಾಗಿದೆ.

Cd. refer your email for Citizen Charter Copy)

**ಸದಸ್ಯ ಕಾರ್ಯದರ್ಶಿ**

11/12/15

**ಇವರಿಗೆ,**

1) ಎಲ್ಲಾ ವಿಭಾಗೀಯ/ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
2) ಎಲ್ಲಾ ಪ್ರಾದೇಶಿಕ ಅಧಿಕಾರಿಗಳ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
3) ಮುಖ್ಯ ಪರಿಸರ ಅಧಿಕಾರಿಗಳು–1,2 ಮತ್ತು 3 ಇವರ ಗಮನಕ್ಕಾಗಿ.
4) ಹಿರಿಯ ಪರಿಸರ ಅಧಿಕಾರಿ (ತ್ಯಾಜ್ಯ ನಿರ್ವಹಣ)ರವರ ಮಾಹಿತಿಗಾಗಿ.
5) ಪರಿಸರ ಅಧಿಕಾರಿ (E-Governance Cell) websiteನಲ್ಲಿ ಹಾಕಲು.